ಓ ಎಸ್ ನಂ.132/2024
ಡಿ.ಡಬ್ಲ್ಯು-1 ಬೋಜಪ್ಪ ತಂದೆ ಯಶವಂತ ಬಿರಾದಾರ

**(ಇಂದು ದಿನಾಂಕಃ 11-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀಮತಿ ಎ ಟಿ ಡಿ ವಕೀಲರಿಂದ.

ನನ್ನ ತಂದೆಯ ಹೆಸರು ಯಶವಂತ ಇರುತ್ತದೆ. ನನ್ನ ತಂದೆಯ ಅಣ್ಣನ ಹೆಸರು ಭೀಮರಾಯ ಆಗಿರುತ್ತದೆ. ವಾದಿ ದುಂಡವ್ವರವರು ಭೀಮರಾಯರವರ ಮಗಳು ಎಂದರೆ ಸರಿ. ನನ್ನ ಅಜ್ಜನಾದ ಬೋಜಪ್ಪರವರಿಗೆ ಭೀಮರಾಯ ಮತ್ತು ಯಶವಂತ ಇಬ್ಬರೆ ಮಕ್ಕಳು ಎಂದರೆ ಸರಿ. ಸಾಕ್ಷಿಯು ನನ್ನ ಅಜ್ಜ ಬೋಜಪ್ಪರವರಿಗೆ ಸುಂದರಮ್ಮ ಎಂಬ ಮಗಳೂ ಸಹ ಇರುತ್ತಾಳೆ ಎನ್ನುತ್ತಾರೆ. ದಾವಾ ಜಮೀನುಗಳು ನಮ್ಮ ಹಿರಿಯರಿಂದ ಬಂದಿರುತ್ತವೆ ಎಂದರೆ ಸರಿ. ನನ್ನ ಅಜ್ಜ ಬೋಜಪ್ಪ ಮತ್ತು ಅವರ ಸಹೋದರನಾದ ಚಂದ್ರಶಾರವರ ನಡುವೆ ಪಾಲು ಆಗಿ ದಾವಾ ಆಸ್ತಿಗಳು ನನ್ನ ಅಜ್ಜನ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ಭೀಮರಾಯರವರಿಗೆ ವಾದಿ ದುಂಡವ್ವ ಒಬ್ಬಳೆ ಮಗಳು ಎಂದರೆ ಸರಿ. ದುಂಡವ್ವರವರಿಗೆ ಯಾವುದೆ ಸಹೋದರರು ಮತ್ತು ಸಹೋದರಿಯರು ಇರುವುದಿಲ್ಲ. ದಾವಾ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಇರುತ್ತವೆ ಎಂದರೆ ಸರಿ.

೨. ಇಲ್ಲಿಯವರೆಗೆ ದಾವಾ ಆಸ್ತಿಗಳಲ್ಲಿ ಪಾಲು ಆಗಿಲ್ಲ ಎಂದರೆ ಸರಿಯಲ್ಲ. ವಾದಿ ದುಂಡವ್ವರವರಿಗೆ ಯಾವುದೆ ಪಾಲು ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ವಾದಿ ದುಂಡವ್ವರವರಿಗೆ ೩ ಎಕರೆ ಜಮೀನು ಮತ್ತು ಮದುವೆಯಲ್ಲಿ ೨ ತೊಲೆ ಬಂಗಾರ ಕೊಟ್ಟಿರುತ್ತೇವೆ ಎನ್ನುತ್ತಾರೆ. ವಾದಿಗೆ ನಾವು ಪಾಲು ಕೊಡದ ಕಾರಣ ಅವರು ಕೇಸು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ವಾದಿ ದುಂಡವ್ವರವರು ತಮಗೆ ನೀಡಿದ ೩

ಎಕರೆ ಜಮೀನನ್ನು ಸರಕಾರ ಸ್ವಾಧೀನಪಡಿಸಿಕೊಂಡಿದ್ದು, ಅದರ ಪರಿಹಾರದ ಹಣವನ್ನು ಪಡೆದಿರುತ್ತಾರೆ ಎನ್ನುತ್ತಾರೆ. ವಾದಿ ದುಂಡವ್ವರವರು ಆ ರೀತಿ ಪರಿಹಾರದ ಹಣವನ್ನು ಪಡೆದ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನಾನು ಹೇಳಿದಂತೆ ಯಾವುದೆ ಪಾಲು ಆಗಿಲ್ಲ ಕೇವಲ ಹೆಸರಿಗೆ ಮಾತ್ರ ನಾವು ವಾದಿ ದುಂಡವ್ವರವರ ತಾಯಿಯಾದ ಹೂವಕ್ಕನ ಹೆಸರಿನಲ್ಲಿ ಜಮೀನು ಮಾಡಿದ್ದೇವು ಎಂದರೆ ಸರಿಯಲ್ಲ. ವಾದಿ ದುಂಡವ್ವರವರ ಹೆಸರಿನಲ್ಲಿ ಜಮೀನಿನ ಪಹಣಿಗಳು ಇರುತ್ತವೆ. ಸದರಿ ಪಹಣಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

೩. ಸರ್ವೆ ನಂಬರ ೧೯೮ ರ ಜಮೀನಿನ ಪಹಣಿಯನ್ನು ಮಾತ್ರ ನಾನು ಹಾಜರುಪಡಿಸಿದದ್ದು, ದಾವಾ ಆಸ್ತಿಗಳಲ್ಲಿ ವಾದಿಯರಿಗೆ ಯಾವುದೆ ಪಾಲು ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ವಾದಿಯರ ಹೆಸರಿನಲ್ಲಿ ಇಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರಿನಲ್ಲಿ ಇರುತ್ತವೆ ಎನ್ನುತ್ತಾರೆ. ನನ್ನ ಹೆಸರಿನಲ್ಲಿಯೂ ಕೂಡಾ ಜಮೀನಿನ ಪಹಣಿ ಇದೆ ಎಂದರೆ ಸರಿ. ಸರ್ವೆ ನಂಬರ ೧೯೮ ರಲ್ಲಿಯೂ ಕೂಡಾ ಯಾವುದೆ ಪಾಲು ನೀಡಿಲ್ಲ ಕೇವಲ ಹೆಸರಿಗೆ ಮಾತ್ರ ಹೂವಕ್ಕರವರ ಹೆಸರು ನಮೂದಿಸಲಾಗಿದೆ ಎಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆಯ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ವಾದಿಯರಿಗೂ ಕೂಡಾ ಪಾಲು ಇದೆ ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ನೀಡಬಾರದು ಎಂಬ ಉದ್ದೇಶದಿಮದ ಒಂದು ಸುಳ್ಳು ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.